
## ನಿವೇದನೆ

# ಸರ್ಕಾರಿ ಶಾಲೆಗಳ ಬಗ್ಗೆ ಭಾವುಕ ಮಾತು ಸಾಕು ಪ್ರಾಯೋಗಿಕ ನೆಲೆಗಟ್ಟಿನ ಕಾರ್ಯಕ್ರಮ ಬೇಕು

**ಸರ್ಕಾರಿ ಶಾಲೆಯೊಂದರಲ್ಲಿ ಇಬ್ಬರು ಶಿಕ್ಷಕಿಯರು ತಮ್ಮ ಸ್ವಂತ ಹಣದಲ್ಲಿ ಕೊಳವೆಬಾವಿ ಕೊರೆಸಿದ್ದಾರೆ. ಸಾರ್ಥಕ ಸೇವೆಗೆ ದಾರಿ ಆಗುವ ಇಂತಹ ಮಾದರಿಗಳು ಹೆಚ್ಚಾಗುವುದು ಸಮಾಜದ ಒಳಿತಿನ ದೃಷ್ಟಿಯಿಂದ ಅಪೇಕ್ಷಣೀಯ. ಇಂತಹ ಕೆಲಸಗಳಿಗೆ ಸೇವಾ ಸಂಸ್ಥೆಗಳು ಮತ್ತು ಸಮುದಾಯದ ಮುಖಂಡರು ಕೂಡ ಕೈಜೋಡಿಸಬೇಕು.**



ಈಶ್ವರ್

ಇಬ್ಬರು ಶಿಕ್ಷಕಿಯರು ಎರಡೂವರೆ ಲಕ್ಷ ರೂಪಾಯಿ ಹೊಂದಿಸಿ, ಸರ್ಕಾರಿ ಶಾಲೆಯೊಂದರಲ್ಲಿ ಕೊಳವೆಬಾವಿ ಕೊರೆಸಿದ ಸುದ್ದಿಯೊಂದು ಚಿಕ್ಕಮಗಳೂರು ಜಿಲ್ಲೆಯಿಂದ ವರದಿಯಾಗಿದೆ. ಇದು, 'ಒಳ್ಳೆಸುದ್ದಿ'ಯಾಗಿ ಮಾತ್ರ ಗಮನ ಸೆಳೆಯಬೇಕಾಗಿಲ್ಲ. ಈ ವಿಧಾಯಕ ಕೆಲಸವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಇದರ ಒಡಲಲ್ಲಿ ಇನ್ನೂ ಹಲವಾರು ಮಹತ್ವದ ಅಂಶಗಳು, ಜಡ್ಡುಗಟ್ಟಿದ ವ್ಯವಸ್ಥೆಯೊಂದರ ಉಪೇಕ್ಷೆಯ ಧೋರಣೆಗಳು ಹುದುಗಿರುವುದು ಯಾರಿಗಾದರೂ ಮನವರಿಕೆ ಆಗುತ್ತದೆ.

ಸಮಷ್ಟಿ ಪ್ರಜ್ಞೆ ಎಂಬುದು ಕಿಮ್ಮತ್ತು ಕಳೆದುಕೊಂಡಿರುವ, ವ್ಯಕ್ತಿಹಿತವೇ ಮುಖ್ಯ ಎಂಬ ಭಾವನೆ ಎಲ್ಲ ವರ್ಗದ ಜನರಲ್ಲೂ ಬಲಗೊಳ್ಳುತ್ತಿರುವ ಕಾಲಘಟ್ಟ ಇದು. ಇಂತಹ ಸಂದರ್ಭದಲ್ಲಿ, ಮಾಚಗೊಂಡನಹಳ್ಳಿ ಎಂಬ ಗ್ರಾಮದಲ್ಲಿ ಮಕ್ಕಳಿಗೆ ಕುಡಿಯುವ ನೀರು ಪೂರೈಸಲು ಶಿಕ್ಷಕಿಯರಾದ ಹೀನಾ ತಬಸುಮ್ ಮತ್ತು ರಜಿಯಾ ಸುಲ್ತಾನ ಅವರು ತಮ್ಮ ಸ್ವಂತ ಹಣದಲ್ಲಿ ಬೋರ್‌ವೆಲ್ ಕೊರೆಸಿರುವುದು ಎಲ್ಲರೂ ಮೆಚ್ಚುವಂತಹ ಮತ್ತು ಪ್ರಶಂಸೆಗೆ ಪಾತ್ರವಾಗುವಂತಹ ಸಂಗತಿ.

ಇದರೊಂದಿಗೆ ಕೆಲವು ಪ್ರಶ್ನೆಗಳು ಕೂಡ ಉದ್ಭವಿಸುತ್ತವೆ. ಈ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಲ್‌ಕೆಜಿಯಿಂದ ಏಳನೇ ತರಗತಿಯವರೆಗೆ ಒಟ್ಟು 250 ಮಕ್ಕಳು ಕಲಿಯುತ್ತಿದ್ದಾರೆ. ಆದರೆ ಶಾಲೆಗೆ ಅಗತ್ಯವಿರುವಷ್ಟು ಪ್ರಮಾಣದಲ್ಲಿ ನಿತ್ಯ ನೀರು ಪೂರೈಸಲು ಸಮರ್ಪಕವಾದ ವ್ಯವಸ್ಥೆ ಇಲ್ಲ. ಗ್ರಾಮ ಪಂಚಾಯಿತಿಯಿಂದ ಮೂರು ದಿನಗಳಿಗೊಮ್ಮೆ ಕುಡಿಯುವ ನೀರು ಪೂರೈಕೆ ಆಗುತ್ತದೆ. ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ವಿದ್ಯಾರ್ಥಿಗಳು, ಅಡುಗೆ ಸಿಬ್ಬಂದಿ ಮತ್ತು ಶಿಕ್ಷಕರು ತೊಂದರೆ ಅನುಭವಿಸುತ್ತಿದ್ದರು ಎಂಬುದು ವ್ಯವಸ್ಥೆಯ ಲೋಪಗಳಿಗೆ ಕನ್ನಡಿ ಹಿಡಿಯುತ್ತದೆ.

ಇದು, ಈ ಶಾಲೆಯೊಂದರ ಸಮಸ್ಯೆ ಮಾತ್ರ ಅಲ್ಲ. ರಾಜ್ಯದಲ್ಲಿನ ಸಾವಿರಾರು ಸರ್ಕಾರಿ ಶಾಲೆಗಳು ಈಗಲೂ ಶೌಚಾಲಯ ಹೊಂದಿಲ್ಲ. ಶಾಲೆಗಳು ಎದುರಿಸುತ್ತಿರುವ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ನಮ್ಮ ಆಡಳಿತ ವ್ಯವಸ್ಥೆಗೆ ಇನ್ನೂ ಸಾಧ್ಯವಾಗಿಲ್ಲ. ಅನೇಕ ಶಾಲೆಗಳಲ್ಲಿ ಕುಡಿಯುವ ನೀರನ್ನು ವಿದ್ಯಾರ್ಥಿಗಳು ಮನೆಯಿಂದಲೇ ಒಯ್ಯುವಂತಹ, ಶಿಕ್ಷಕಿಯರು ಮತ್ತು ವಿದ್ಯಾರ್ಥಿನಿಯರು ದೇಹಬಾಧೆ ನಿವಾರಿಸಿಕೊಳ್ಳಲು ಶಾಲೆಗಳ ಸಮೀಪದ ಮನೆಗಳನ್ನು ಅವಲಂಬಿಸುವಂತಹ ಸ್ಥಿತಿ ಇರುವುದು ಶೋಚನೀಯ.

'ಸರ್ಕಾರಿ ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಹೆಣ್ಣುಮಕ್ಕಳಿಗೆ ಶೌಚಾಲಯದಂಥ ವ್ಯವಸ್ಥೆ ಕಲ್ಪಿಸದಿರುವುದು ನಾಚಿಕೆಗೇಡಿನ ವಿಚಾರ' ಎಂದು ರಾಜ್ಯ ಸರ್ಕಾರವನ್ನು ಕೆಲವು ತಿಂಗಳ ಹಿಂದೆ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು. ಆದರೂ ಅಂತಹ ಮಾತು ನಮ್ಮ ಅಧಿಕಾರಸ್ಥರಿಗೆ ನಾಟುವುದೇ ಇಲ್ಲ. ಈ ನೆಲದ ಭಾಷೆಯನ್ನು ಉಳಿಸುವ ಮತ್ತು ಬೆಳೆಸುವ ಕೆಲಸದಲ್ಲಿ ಸರ್ಕಾರಿ ಶಾಲೆಗಳ ಪಾತ್ರ ಮಹತ್ವಪೂರ್ಣವಾದುದು. ಸರ್ಕಾರಿ ಶಾಲೆಗಳಿಗೆ ಅಗತ್ಯ ಮೂಲ ಸೌಕರ್ಯ ಒದಗಿಸಿ, ಶಿಕ್ಷಣದ ಗುಣಮಟ್ಟ ವೃದ್ಧಿಸುವ ಮೂಲಕ ಹೆಚ್ಚು ಮಕ್ಕಳನ್ನು ಸೆಳೆಯುವ ಕೆಲಸ ಆದ್ಯತೆಯ ಮೇಲೆ ಆಗಬೇಕು. ಆದರೆ ವಸ್ತುಸ್ಥಿತಿಯು ಇದಕ್ಕೆ ತದ್ವಿರುದ್ಧವಾಗಿದೆ.

'ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಸ್ಪಂದನ ಲಭಿಸಲಿಲ್ಲ...' ಎಂದು ಮಾಚಗೊಂಡನಹಳ್ಳಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಲೋಕೇಶ್ ಅವರು ನೋವು ತೋಡಿಕೊಂಡಿದ್ದಾರೆ. ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲೇ ಪರಿಹಾರ ದೊರಕಿಸಿಕೊಡುವ ಮಹತ್ತರ ಆಶಯವನ್ನು ಹೊಂದಿರುವ ಪಂಚಾಯತ್ ವ್ಯವಸ್ಥೆಯ ವೈಫಲ್ಯವನ್ನೂ ಈ ವಿದ್ಯಮಾನವು ಎತ್ತಿತೋರಿಸುತ್ತದೆ.

'ರಂಜಾನ್ ಮಾಸದಲ್ಲಿ ಸಮಾಜಮುಖಿ ಕೆಲಸ ಮಾಡುವಂತಹ ರೂಢಿ'ಯೊಂದರ ಮುಂದುವರಿಕೆಯಾಗಿ ವಿದ್ಯಾರ್ಥಿಗಳಿಗೆ ಈ ಸಲ ಕೊಳವೆಬಾವಿ ರೂಪದಲ್ಲಿ ದೊರೆತಿರುವ ಕೊಡುಗೆಯು ಅತ್ಯಂತ ಮೌಲಿಕವಾದುದು. ಹಬ್ಬ–ಆಚರಣೆಗಳು ಈ ರೀತಿ ಸಾರ್ಥಕ ಸೇವೆಗೆ ದಾರಿ ತೆರೆಯುವಂತಹ ಮಾದರಿಗಳು ಹೆಚ್ಚು ಹೆಚ್ಚು ಪ್ರಕಟಗೊಳ್ಳಬೇಕಾದುದು ಒಟ್ಟಾರೆ ಸಮಾಜದ ಒಳಿತಿನ ದೃಷ್ಟಿಯಿಂದ ಅಪೇಕ್ಷಣೀಯ.

ಸರ್ಕಾರಿ ಶಾಲೆಗಳ ಸ್ಥಿತಿ ಉತ್ತಮವಾಗಿಲ್ಲದಿದ್ದರೆ ಅದರ ಪರಿಣಾಮ ಹೆಚ್ಚಿಗೆ ತಟ್ಟುವುದು ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳನ್ನು. ಈ ಶಾಲೆಗಳು ಕಲಿಕೆಯ ಕೇಂದ್ರಗಳಾಗಿರುವುದರ ಜೊತೆಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವ ವೇದಿಕೆಗಳೂ ಆಗಿವೆ. ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳು ಉತ್ತಮಗೊಂಡು, ಗುಣಮಟ್ಟದ ಶಿಕ್ಷಣ ದೊರೆತರೆ ಮಕ್ಕಳು ಸರ್ಕಾರಿ ಶಾಲೆಗಳತ್ತ ಸಹಜವಾಗಿಯೇ ಆಕರ್ಷಿತರಾಗುತ್ತಾರೆ. ಅಧಿಕಾರಸ್ಥರು ಸರ್ಕಾರಿ ಶಾಲೆಗಳ ಬಗ್ಗೆ ಭಾವುಕವಾಗಿ ಮಾತನಾಡುವುದನ್ನು ಬಿಟ್ಟು ಪ್ರಾಯೋಗಿಕ ನೆಲೆಗಟ್ಟಿನಲ್ಲಿ ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತಹ ಯೋಜನೆಗಳನ್ನು ಕೈಗೊಳ್ಳಬೇಕು. ಇಂತಹ ಕೆಲಸಗಳಿಗೆ ವಿವಿಧ ಸೇವಾ ಸಂಸ್ಥೆಗಳು ಮತ್ತು ಸಮುದಾಯದ ಮುಖಂಡರು ಕೂಡ ಕೈಜೋಡಿಸಬೇಕು.

■ **ಎನ್. ಉದಯಕುಮಾರ್**